ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳವರ ನ್ಯಾಯಾಲಯ, ಕೃಷ್ಣರಾಜಪೇಟೆ.

ಓ ಎಸ್ 139:2016 ಪ್ರಾಸಾ:4

| | |
|---|---|
| ಸಾಕ್ಷಿದಾರರ ಹೆಸರು:- | ಕೆ ಎಸ್ ಚಂದ್ರು |
| ತಂದೆಯ ಹೆಸರು:ಗಂಡನ ಹೆಸರು: | ಸಿದ್ದೇಗೌಡ |
| ವಯಸ್ಸು:- | 43 ವರ್ಷ |
| ವೃತ್ತಿ:- | ವ್ಯವಸಾಯ |
| ವಾಸ ಸ್ಥಳ:- | ಕೆ ಆರ್ ಪೇಟೆ ಟೌನ್ |

ಸಾಕ್ಷಿಗೆ ದಿನಾಂಕ:05-09-2018 ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಸಾಕ್ಷಿ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎನ್ ಎಂ ವಕೀಲರಿಂದ:**

ಈ ಕೇಸಿನಲ್ಲಿ ಸಾಕ್ಷಿ ಹೇಳಲು ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿದೆ. ವಾದಿ ಪರಿಚಯ. ಪ್ರತಿವಾದಿ ಪರಿಚಯ. ವಾದಿಗೆ ಸೇರಿದ ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಮನೆ ಕಟ್ಟಲು ಬಂದಿದ್ದು ಹಾಗೂ ಆತನು ಸದರಿ ಸ್ವತ್ತು ತನಗೆ ಸೇರಿದ್ದು ಎಂದು ಹೇಳಿದ್ದು ಆ ಕಾರಣ ವಾದಿ ಈ ಕೇಸು ಹಾಕಿ ನ್ಯಾಯಾಲಯಕ್ಕೆ ಬಂದಿದ್ದಾರೆ. ಸಾಕ್ಷಿಗೆ ಈಗ ನಿಪಿ **8** ರಿಂದ ನಿಪಿ **15** ರವರೆಗೆ ಫೋಟೋಗಳನ್ನು ತೋರಿಸುತ್ತಿದ್ದು ಸಾಕ್ಷಿ ಅವುಗಳನ್ನು ನೋಡಿ ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಮನೆ ಕಟ್ಟುತ್ತಿದ್ದಾರೆ ಎನ್ನುತ್ತಾರೆ. ನಾನು ಕೂಲಿ ವ್ಯವಸಾಯ ಮಾಡಲು ದಾವಾ ಜಮೀನಿಗೆ ಹೋಗಿದ್ದೆ. ನನ್ನನ್ನು ಸದರಿ ಕೆಲಸಕ್ಕೆ ವಾದಿ ಕರೆದುಕೊಂಡು ಹೋಗಿದ್ದರು.

**ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀಕೆ ಎನ್ ಎನ್ ವಕೀಲರಿಂದ:-**

ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ನಾನು ಪ್ರಿಂಟಿಂಗ್ ಪ್ರೆಸ್ ಇಟ್ಟು 10 ವರ್ಷ ಆಯಿತು. ನನ್ನ 33 ನೇ ವಯಸ್ಸಿನಲ್ಲಿ ಪ್ರಿಂಟಿಂಗ್ ಪ್ರೆಸ್ ಕೆಲಸಕ್ಕೆ ಸೇರಿಕೊಂಡಿದ್ದೇನೆ. ವಾದಿಯ ತಂದೆ ಮಾಯಪ್ಪ ಗೊತ್ತು. ಸದರಿಯವರು ನನ್ನ ತಾಯಿಯ ತಂದೆ ಎಂದರೆ ಸರಿ. ವಾದಿ ನನ್ನ ದೊಡ್ಡಮ್ಮ ಎಂದರೆ ಸರಿ. ಈ ದಿನ ನ್ಯಾಯಾಲಯದ ಹೊರಗಡೆ ಇರುವ ಸಿದ್ದೇಗೌಡ ನನ್ನ ಚಿಕ್ಕಮ್ಮನ ಮಗ ಎಂದರೆ ಸರಿ. ವಾದಿಯ ಮನೆ ಹಾಗೂ ಮಾಯಪ್ಪ ಅಂದರೆ ನಮ್ಮ ತಾತನ ಮನೆ ಅಕ್ಕಪಕ್ಕ ಇವೆ ಎಂದರೆ ಸರಿಯಲ್ಲ. ಮಾಯಪ್ಪ ಕೆ ಆರ್ ಪೇಟೆಯವರು. ನಮ್ಮ ಮನೆಗೂ ಸದರಿ ಮಾಯಪ್ಪನ ಮನೆಗೂ ಸುಮಾರು 100 ಅಡಿ ದೂರ ಆಗುತ್ತದೆ. ಸದರಿ ಮಾಯಪ್ಪನ ಮನೆಯ ಪಶ್ಚಿಮಕ್ಕೆ ಯಾರ ಮನೆ ಎಂದರೆ ಗೊತ್ತಿಲ್ಲ.

ನಮ್ಮ ಜಮೀನಿನ ಉತ್ತರಕ್ಕೆ ಪ್ರತಿವಾದಿ ಯ ತಂದೆ ಜಮೀನು ಖರೀದಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅಲ್ಲಿ ಒಂದು ಬದು ಇದ್ದು ಸದರಿ ಬದುವಿನ ವಿಚಾರವಾಗಿ ನಮ್ಮ ಹಾಗೂ ಪ್ರತಿವಾದಿಯ ತಂದೆ ನಡುವೆ ಗಲಾಟೆಯಾಗಿತ್ತು ಎಂದರೆ ಗೊತ್ತಿಲ್ಲ. ದಾವಾ ಜಮೀನು ನೋಡಿದ್ದೇನೆ. ದಾವಾ ಜಮೀನಿನ ಪಶ್ಚಿಮಕ್ಕೆ ಷೆಡ್ಯೂಲ್ ನಲ್ಲಿ ತೋರಿಸಿರುವ ಮಾಯಪ್ಪನ ಜಮೀನು ಅಂದರೆ ಸದರಿ ಮಾಯಪ್ಪ ನಮ್ಮ ತಾತ ಎಂದರೆ ಸರಿ. ದಾವಾ ಜಮೀನಿನ ದಕ್ಷಿಣಕ್ಕೆ ಬುಡುಗಿ ಸಿಂಗ್ರಿ ವಗೈರೆ ಜಮೀನು ಎಂದರೆ ಸರಿ. ದಾವಾ ಜಮೀನಿನ ಉತ್ತರಕ್ಕೆ ಷೆಡ್ಯೂಲ್ ನಲ್ಲಿ ತೋರಿಸಿರುವ ಕಾಳೇಗೌಡ ಜಮೀನು ಎಂದರೆ ಸರಿ. ಕಾಳೇಗೌಡನ ತಂದೆ ಹೆಸರು ಚಂದ್ರೇಗೌಡ ಎಂದರೆ ಸಾಕ್ಷಿಯು ಕಾಳೇಗೌಡ ಗೊತ್ತು ಅವರ ತಂದೆ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಕಾಳೇಗೌಡನ ತಂದೆ ಮೊಗಣ್ಣಗೌಡ ಗೊತ್ತು ಎನ್ನುತ್ತಾರೆ. ದಾವಾ ಜಮೀನಿನ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸಾಕ್ಷಿಯು ಅಲ್ಲಿ ಒಂದು ಕಾಲು ದಾರಿ ಇದ್ದು ಸುಮಾರು 25 ಮೀಟರ್ ಬಿಟ್ಟು ಹಾಸನ - ಮೈಸೂರು ರಸ್ತೆ ಇದೆ ಎನ್ನುತ್ತಾರೆ. ದಾವಾ ಜಮೀನಿನ ಪಶ್ಚಿಮ ಉತ್ತರ ಹಾಗೂ ದಕ್ಷಿಣಕ್ಕೆ ಇರುವ ಎಲ್ಲಾ ಜಮೀನುಗಳು ಸರ್ಕಾರಕ್ಕೆ ಅಕ್ವೈರ್ ಆಗಿವೆ ಎಂದರೆ ಗೊತ್ತಿಲ್ಲ.

1958 ರಲ್ಲಿ ಏನೇನು ವ್ಯವಹಾರ ಆಗಿದೆ ಎಂಬುದು ಗೊತ್ತಿಲ್ಲ. ದಾವಾ ಜಮೀನಿನ ಚಕ್ಕುಬಂದಿಯ ನಡುವೆ ಸರ್ವೆ ನಂ 180 ರಲ್ಲಿ 13 ಗುಂಟೆ ಜಮೀನು ಅಸ್ತಿತ್ವದಲ್ಲಿದೆ ಎಂದರೆ ಸಾಕ್ಷಿಯು ಸದರಿ ವಿಚಾರ ಗೊತ್ತಿಲ್ಲ ಆದರೆ ಸರ್ವೆ ನಂ 10:2 ರಲ್ಲಿ 27 ಗುಂಟೆ ಇದೆ ಎನ್ನುತ್ತಾರೆ. ಬುಡುಗಿ ಸಿಂಗ್ರಿ ಇವರನ್ನು ನಾನು ನೋಡಿಲ್ಲ. ಸದರಿಯವರ ಮಕ್ಕಳನ್ನು ಸಹ ನಾನು ನೋಡಿಲ್ಲ. ಸದರಿ ಬುಡುಗಿ ಸಿಂಗ್ರಿ ತೀರಿಕೊಂಡು ಆಗಲೇ 60 – 70 ವರ್ಷ

ಆಯಿತು ಎಂದರೆ ಗೊತ್ತಿಲ್ಲ. ಸದರಿ ಬುಡುಗಿ ಸಿಂಗ್ರಿ ಇವರ ಜಮೀನು ಯಾರಿಗೆ ಹೋಯಿತು ಎಂದು ಸಹ ನನಗೆ ಗೊತ್ತಿಲ್ಲ. ಮಾಯಪ್ಪನ ಮಕ್ಕಳು ನನ್ನ ಸೋದರ ಮಾವಂದಿರು ಎಂದರೆ ಅವರು ನನಗೆ ಗೊತ್ತಿಲ್ಲ. ದಾವಾ ಜಮೀನಿನ ಉತ್ತರಕ್ಕೆ ತೋರಿಸಿರುವ ಮೊಗಣ್ಣಗೌಡ ಹಾಗೂ ಕಾಳೇಗೌಡರ ಜಮೀನು ಯಾರಿಗೆ ಹೋಯಿತು ಎಂದು ಸಹ ನನಗೆ ಗೂತ್ತಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಸರ್ವೆ ನಂ 10:2 ರ ಬಗ್ಗೆ ಗೊತ್ತು ಎನ್ನುತ್ತಾರೆ. ದಾವ ಷೆಡ್ಯೂಲ್ ಚಕ್ಕುಬಂದಿಯಲ್ಲಿ ಈಗ ಯಾವುದೇ ಜಮೀನು ಅಸ್ತಿತ್ವದಲ್ಲಿ ಇಲ್ಲ ಎಂದು ಹೇಳಿ ನಂತರ ಸದರಿ ಚಕ್ಕುಬಂದಿಯಲ್ಲಿ ಜಮೀನು ಅಸ್ತಿತ್ವದಲ್ಲಿದೆ ಎನ್ನುತ್ತಾರೆ. ದಾವಾ ಷೆಡ್ಯೂಲ್ ಚಕ್ಕುಬಂದಿಯಲ್ಲಿ ಸರ್ವೆ ನಂ 10 ಅಸ್ತಿತ್ವದಲ್ಲಿಲ್ಲ ಎಂದರೆ ಸಾಕ್ಷಿಯು ಅದು ಯಾವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಪ್ರತಿವಾದಿಯರ್ರು ಈಗ ಕಟ್ಟುತ್ತಿರುವ ಮನೆಯ ಚಕ್ಕುಂಬದಿ ಗೊತ್ತ ಎಂದರೆ ಸಾಕ್ಷಿಯು ಸದರಿ ಮನೆಯ ಚಕ್ಕುಬಂದಿ ಗೊತ್ತಿಲ್ಲ ಆದರೆ ಪ್ರತಿವಾದಿಯು ದಾವಾ ಸ್ವತಿತನಲ್ಲಿ ಕಟ್ಟುತ್ತಿರುವ ಮನೆಯ ಬಗ್ಗೆ ಗೊತ್ತು ಎನ್ನುತ್ತಾರೆ. ಪೂರ್ವಕ್ಕೆ ಸರ್ವೆ ನಂ 10:ಪಿ1 ಪಿ2, ಪಶ್ಚಿಮಕ್ಕೆ ತಮ್ಮಂಯ್ಯನ ಜಮೀನು ಉತ್ತರಕ್ಕೆ ರಾಮೇಗೌಡನ ಹೆಂಡತಿ ಕಮಲಮ್ಮ, ಶ್ರೀನಿವಾಸ , ಭಾಗ್ಯಮ್ಮ ಇವರ ಜಮೀನು ದಕ್ಷಿಣಕ್ಕೆ ಅಮಾಸೇಗೌಡ , ಚಿಕ್ಕೇಗೌಡ , ಮಹದೇವಪ್ಪ , ಭಾಗ್ಯಮ್ಮ, ಮಾದೇಗೌಡ , ವರದರಾಜೇಗೌಡ ಈ ಚಕ್ಕುಬಂದಿಯಲ್ಲಿರುವ ಜಮೀನು ಗೊತ್ತಿಲ್ಲ. ಸಾಕ್ಷಿಗೆ ಈಗ ನಿಪಿ 8 ರಿಂದ ನಿಪಿ 15 ಪೋಟೋಗಳನ್ನು ತೋರಿಸುತ್ತಿದ್ದು ಸಾಕ್ಷಿಯು ಅವುಗಳನ್ನು ನೋಡಿ ಸದರಿ ಪೋಟೋದಲ್ಲಿ ಪ್ರತಿವಾದಿ ಕಟ್ಟುತ್ತಿರುವ ಮನೆ ಬಗ್ಗೆ ಮಾತ್ರ ಗೊತ್ತು ಹಾಗೂ ಅದರ ಸುತ್ತಮುತ್ತಲಿನ ಮನೆಗಳ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ ಮನೆ ಕಟ್ಟಲು ಪ್ರಾರಂಬಿಸಿ ಈಗಾಗಲೇ 8 – 9 ವರ್ಷ ಆಗಿದೆ ಎಂದರೆ ಸಾಕ್ಷಿಯು 2 – 3 ವರ್ಷ ಆಗಿದ್ದು ಮನೆ ಕಟ್ಟುವ ವಿಚಾರಕ್ಕೆ ಗಲಾಟೆಯಾಗಿದೆ ಎನ್ನುತ್ತಾರೆ. ಪ್ರತಿವಾದಿಯ ಜಮೀನಿನ ಅಕ್ಕಪಕ್ಕ ನನಗೆ ಸುಮಾರು 2 – 3 ಕಿ.ಮೀ ದೂರದಲ್ಲಿ ಯಾವುದೇ ಜಮೀನು ಇಲ್ಲ. ಅಗಸನಕಟ್ಟೆ ಪಕ್ಕ ಇರುವ ನಮ್ಮ ಜಮೀನಿನ ಚಕ್ಕುಬಂದಿ ಗೊತ್ತಿಲ್ಲ. ದಾವಾ ಜಮೀನು ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಸಹ ವಾದಿ , ನಾನು ಹಾಗೂ ವಾದಿ ಪರ ಸಾಕ್ಷಿ ಹೇಳಿರುವ ಸಾಕ್ಷಿದಾರರು ಹಾಗೂ ಸಿದ್ದೇಗೌಡ ಸೇರಿ ಪ್ರತಿವಾದಿಗೆ ಸೇರಿದ ಜಮೀನನ್ನು ಲಪಟಾಯಿಸಲು ಸುಳ್ಳು ಕೇಸು ಹಾಕಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದ್ಮೇನೆ ಎಂದರೆ ಸಾಕ್ಷಿಯು ವಾದಿ ಮತ್ತು ಪ್ರತಿವಾದಿ ದಾಯಾದಿಗಳಾಗಿದ್ದು ವಾದಿಯ ಜಮೀನಿನಲ್ಲಿ ಪ್ರತಿವಾದಿ ಮನ ಕಟ್ಟಲು ಹೋಗಿದ್ದಕ್ಕೆ ಗಲಾಟೆಯಾಗಿದೆ ಎನ್ನುತ್ತಾರೆ. ಶ್ರೀಮತಿ ಕೆ ಮಂಜುಳ ಕೆ ಆರ್ ಪೇಟೆಯಲ್ಲಿ ಲಾಯರ್ ಆಗಿ ಕೆಲಸ ಮಾಡುತ್ತಿಸದ್ದಾರೆ ಎಂದರೆ ಗೊತ್ತಿಲ್ಲ. ನಾನು ದಾವಾ ಜಮೀನಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದೆ ಎಂದು ವಾದಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ಬೆರಳಚ್ಚು ಮಾಡಲಾಗಿದೆ.)**

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.